# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

## ಸಿ.ಸಿ.ನಂಬರ. 303/2023

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೋಲಿಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತ : ಚಂದ್ರಕಾಂತ ತಂದೆ ಪರಶುರಾಮ ಸಿಂದೆ,
ವಯಸ್ಸು : 54 ವರ್ಷ, ವೃತ್ತಿ : ಚಾಲಕ ಕೆಲಸ,
ಸಾಃ ಇಂದಿರಾನಗರ, ಕೆ.ಕೆ.ಕೊಪ್ಪ, ಸಾಃಬೆಳಗಾಂವ.

## ದಂಡ ಪ್ರಕ್ರಿಯಾ ಸಂಹಿತೆ ಕಲಂ. 251 ರ ಅಡಿ ಆರೋಪಣ ಸಾರಾಂಶ

ದಿನಾಂಕ 23-10-2022 ರಂದು ಸಂಜೆ 05-15 ರ ಸಮಯದಲ್ಲಿ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ಹಳಿಯಾಳ ತಾಲೂಕಿನ ಹಳಿಯಾಳ-ಯಲ್ಲಾಪುರ ಡಾಂಬರ ರಸ್ತೆ ಸಾಂಬ್ರಾಣಿ ಗ್ರಾಮದ ಹತ್ತಿರ ಅಶೋಕ ಲೈಲ್ಯಾಂಡ್ ವಾಹನ ನಂಬರ ಕೆಎ-22-ಡಿ-5389 ನೇದ್ದರ ಆರೋಪಿಯಾದ ನೀನು ಯಲ್ಲಾಪುರ ಕಡೆಯಿಂದ ಹಳಿಯಾಳ ಕಡೆಗೆ ಅತಿವೇಗ ಮತ್ತು ನಿರ್ಲಕ್ಷತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ಚಲಾಯಿಸಿಕೊಂಡು ಬಂದು, ನಿಮ್ಮ ಎದುರಿನಿಂದ ಅಂದರೆ ಹಳಿಯಾಳ ಕಡೆಯಿಂದ ಯಲ್ಲಾಪುರ ಕಡೆಗೆ ಬರುತ್ತಿದ್ದ ಮೃತ ಗಣೇಶ ಕಾಂಬ್ರೇಕರ ಮತ್ತು ಚಾಸಾ-8 ರವರು ಸವಾರಿ ಮಾಡಿಕೊಂಡು ಹೋಗುತ್ತಿದ್ದ ಕೆಎ-22-ಇ-ವಾಯ್-0572 ನೋಂದಣಿ ಸಂಖ್ಯೆಯ ಬೈಕಗೆ ನೀನು ನಿನ್ನ ರಸ್ತೆ ಮಾರ್ಗವನ್ನು ಬಿಟ್ಟು ಸೈಡಿಗೆ ಬಂದು ಸದರಿ ಮೋಟಾರ್ ಸೈಕಲ್ ಗೆ ಎದುರಿನಿಂದ ಡಿಕ್ಕಿ ಹೊಡೆದು ಅಪಘಾತಪಡಿಸುವ ಮೂಲಕ ಭಾ.ದಂ.ಸಂ. ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ .

ಎರಡನೇಯದಾಗಿ, ಆರೋಪಿಯಾದ ನೀವು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಹಾಗೂ ಸ್ಥಳದಲ್ಲಿ ನಿಮ್ಮ ಈ ಮೇಲಿನ ಕೃತ್ಯದಿಂದಾಗಿ ಮೇಲೆ ವಿವರಿಸಿದ ಕೆಎ-22-ಇ-ವಾಯ್-0572 ವಾಹನದ ಹಿಂಬದಿ ಸವಾರನಾದ ಚಾಸಾ 8 ರವರ ಬಲಕಾಲಿನ ತೊಡೆಯ ಎಲುಬು ಮುರಿದು ಅವರ ಬಲಕೈಯಿಯ ತೋಳಿನ ಬಾಗದ ಹತ್ತಿರ ಬಾವು ಬಂದು ಅವರಿಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡುವ ಮೂಲಕ ಭಾ.ದಂ.ಸಂ. ಕಲಂ 338 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ .

ಮೂರನೇಯದಾಗಿ, ಆರೋಪಿಯಾದ ನೀನು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನಿಮ್ಮ ಈ ಮೇಲಿನ ಕೃತ್ಯದಿಂದಾಗಿ ಮೋಟಾರ ಸೈಕಲ್ ನಂಬರ ಕೆಎ–22–ಇ–ವಾಯ್–0572 ಚಾಲಕನಾದ ಗಣೇಶ ಕಾಂಬ್ರೇಕರ ಮೈಮೇಲೆ ಅಲ್ಲಲ್ಲಿ ಮತ್ತು ತಲೆಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿ ಸದರಿಯವರು ಸ್ಥಳದಲ್ಲಿಯೇ ಮರಣ ಹೊಂದುವಂತೆ ಮಾಡಿ ಅವರ ಸಾವಿಗೆ ಅಪರಾಧಿಕ ನರಹತ್ಯೆ ಮಾಡುವ ಉದ್ದೇಶವಿಲ್ಲದೇ ಮಾಡಿರುವ ಅಪಘಾತವೇ ಕಾರಣ ಆಗಿರುವ ಮೂಲಕ ನೀವು ಭಾ.ದಂ.ಸಂ. ಕಲಂ 304(ಎ) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ .

ಪ್ರಶ್ನೆ 1 : ಈಗ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೇ ?
ಉತ್ತರ : ವಿಚಾರಣೆಯಾಗಬೇಕು.

(ಆರೋಪಿತನಿಗೆ ಆಪಾದನೆಯ ಸಾರಾಂಶವನ್ನು ಆತರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ಕೇಳಿ ಆತನು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸ್ಥಳ : ಹಳಿಯಾಳ . ಸಹಿ ಇದೆ.
ದಿನಾಂಕ : 23–08–2023. ಪ್ರ.ದ.ನ್ಯಾದಂ., ಹಳಿಯಾಳ.